ಅಗತ್ಯಕ್ಕೆ ತಕ್ಕ ವಿಭಿನ್ನ ಬೋಧನಾಕ್ರಮ | ಒಂದೇ ಅಳತೆ ಎಲ್ಲರಿಗೂ ಹೊಂದುವುದಿಲ್ಲ

ಅಂಕುರ್ ಮದನ್

ಬ್ರಹ್ಮಕಮಲ, ಗುಲಾಬಿ, ಸೂರ್ಯಮುಖಿ... ಉತ್ತರಾಖಂಡದಲ್ಲಿ ಸಾಮಾನ್ಯವಾಗಿ ಕಾಣಸಿಗುವ ಕೆಲವು ಹೂವುಗಳ ಹಿಂದಿ ಹೆಸರುಗಳು. ಇದು ಯಾವುದೇ ಮಾಧ್ಯಮಿಕ ಶಾಲೆಯ ಸಸ್ಯಶಾಸ್ತ್ರದ ತರಗತಿಯ ಕುರಿತಾದ ಪ್ರಸ್ತಾಪವಲ್ಲ. ವಾಸ್ತವದಲ್ಲಿ ಇವು ಉತ್ತರಾಖಂಡದ ಅತ್ಯಂತ ದೂರದ ಗ್ರಾಮದಲ್ಲಿರುವ ಒಂದು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿಯು 4ನೇ ತರಗತಿಯ ಮಕ್ಕಳ ಗುಂಪುಗಳಿಗೆ ನೀಡಿರುವ ಹೆಸರುಗಳು. ಶಿಕ್ಷಕರು ವಾರಕ್ಕೊಮ್ಮೆ ಅಥವಾ ವಾರದಲ್ಲಿ ಎರಡು ಬಾರಿ ಮಕ್ಕಳಿಗೆ ಕೊಡುವ ಕೆಲಸಗಳನ್ನು ಗುಂಪಿನ ಸದಸ್ಯರಾಗಿರುವ ಮಕ್ಕಳು ನಿರ್ವಹಿಸಬೇಕು ಎಂಬ ನಿರೀಕ್ಷೆಯಿರುತ್ತದೆ. ಪರಸ್ಪರ ಒಟ್ಟಾಗಿ ಕಥೆ ಪುಸ್ತಕ ಓದುವುದಿರ-ಬಹುದು, ಕಥೆಯನ್ನು ಚಿತ್ರಪಟದಲ್ಲಿ ನಿರೂಪಿಸುವ ಕೆಲಸವಿರಬಹುದು, ಆ ಕಥೆಯನ್ನು ಪಾತ್ರಗಳ ರೂಪದಲ್ಲಿ ನಟಿಸುವುದಿರಬಹುದು, ತಮ್ಮದೇ ಸ್ವಂತ ಕಥೆಯನ್ನು ರಚಿಸುವುದಿರಬಹುದು ಅಥವಾ ಪಠ್ಯಪುಸ್ತಕದ ಪಾಠದಲ್ಲಿರುವ ಪ್ರಶ್ನೆಗಳಿಗೆ ಉತ್ತರ ಬರೆಯುವುದು ಹಾಗೂ ಕಠಿಣ ಪದಗಳಿಗೆ ಅರ್ಥ ಹುಡುಕುವುದಿರಬಹುದು, ಹೀಗೆ ಮುಂತಾದ ಕೆಲಸಗಳಿರುತ್ತವೆ.

ವಿಧಾನಗಳು

ಪೂರೈಸಬೇಕಾದ ಕಾರ್ಯಗಳನ್ನು ಮನಸೋಇಚ್ಛೆ ನೀಡುವುದಿಲ್ಲ ಅಥವಾ ಮಕ್ಕಳನ್ನು ಯಾವುದೇ ಒಂದು ಗುಂಪಿಗೆ ಸಕಾರಣವಿಲ್ಲದೆ ನಿಯೋಜಿಸಲಾಗುವುದಿಲ್ಲ. ಶಿಕ್ಷಕಿಯು ಪ್ರತಿ ಮಗುವಿನ ಕಲಿಕಾ ಮಟ್ಟ, ಒಂದು ಅವಧಿಯಲ್ಲಿ ಆ ಮಗುವಿನ ಪ್ರಗತಿ, ಆಸಕ್ತಿಯ ಹಂತಗಳು ಹಾಗೂ ಅವರ ಸಹವರ್ತಿಗಳೊಂದಿಗಿನ ಸಂಬಂಧದ ಎಳೆಗಳ ಕಡೆಗೆ ಬಹಳ ಗಮನ ನೀಡಿದ ನಂತರವೇ ಮಕ್ಕಳನ್ನು ಆಯಾ ಗುಂಪಿಗೆ ನಿಯೋಜಿಸಿ ಅವರು ಮಾಡಬೇಕಾದ ಕಾರ್ಯಗಳನ್ನು ನೀಡುತ್ತಾರೆ. ಮಕ್ಕಳು ತಮಗೆ ನೀಡಿದ ಹೆಸರಿನ ಬಗ್ಗೆ ಹೆಮ್ಮೆಯನ್ನು ಹೊಂದಿದ್ದು, ಗುಂಪಿನಲ್ಲಿರುವ ಅವರ ಸಹವರ್ತಿಗಳೆಡೆಗೆ ಜವಾಬ್ದಾರಿಯನ್ನು ಹಾಗೂ ಅವಿನಾಭಾವ ಸಂಬಂಧವನ್ನು ಹೊಂದಿರುತ್ತಾರೆ.

ಮಕ್ಕಳಿಗೆ ನೀಡುವ ಕಾರ್ಯಗಳಲ್ಲಿ ಅವರ ಪ್ರಗತಿಯ ಕುರಿತು ದೈನಂದಿನ / ಸಾಪ್ತಾಹಿಕ ದಾಖಲೆಗಳನ್ನು ಶಿಕ್ಷಕಿಯು ನಿರ್ವಹಿಸುತ್ತಿದ್ದು, ಅದರ ಆಧಾರದ ಮೇಲೆ ಮಕ್ಕಳನ್ನು ಇತರ ಗುಂಪುಗಳಿಗೆ ಹಾಗೂ ಕಾರ್ಯಗಳಿಗೆ ಬದಲಾಯಿಸುತ್ತಾರೆ. ಇದರಲ್ಲಿ ಕಡಿಮೆ ಕಲಿಕಾ ಮಟ್ಟವನ್ನು ಹೊಂದಿರುವ ಮಕ್ಕಳನ್ನು ಅವರ ಗುಂಪಿನಲ್ಲಿಯೇ ಹೆಚ್ಚಿನ ಕಲಿಕಾ ಸಾಮರ್ಥ್ಯ ಹೊಂದಿರುವ ಮಕ್ಕಳು ಬೆಂಬಲಿಸುತ್ತಾರೆ ಹಾಗೂ ಒಂದು ರೀತಿಯ ಪರಸ್ಪರ ಸಹಾಯ ಮಾಡುವ ವ್ಯವಸ್ಥೆಯಿಂದ ಈ ಬೋಧನಾ ವಿಧಾನದಲ್ಲಿ ಸಹವರ್ತಿಗಳೊಂದಿಗಿನ ಕಲಿಕೆ ಪ್ರಮುಖ ಅಂಶವಾಗಿದೆ. ಒಂದು ದೂರದ ಹಳ್ಳಿಯ ಸರ್ಕಾರಿ ಶಾಲೆಯ ಕಿಕ್ಕಿರಿದ, ಮಿಶ್ರ ಸಾಮರ್ಥ್ಯವುಳ್ಳ, ಕಡಿಮೆ ಸಂಪನ್ಮೂಲವಿರುವ ತರಗತಿಯು 'ಉತ್ತಮ ಬೋಧನಾ ಅಭ್ಯಾಸಗಳ' ಕುರಿತು ಉದಾಹರಣೆಗಳನ್ನು ಹುಡುಕುವವರಿಗೆ ಹಾಗೂ ಇದರಿಂದ ಪ್ರೇರಿತರಾಗುವವರಿಗೆ ಯಾವುದೇ ರೀತಿಯಲ್ಲಿ ಒಂದು ತಕ್ಕುದಾದ ಸ್ಥಳವೆಂದು ಅನಿಸುವುದಿಲ್ಲವಾದರೂ ಮೇಲೆ ಹೇಳಿದ ಈ ತರಗತಿಯು ಇದಕ್ಕೆ ಮಾದರಿಯಾಗಿದೆ.

ವ್ಯಕ್ತಿಗತ ಅಗತ್ಯಗಳಿಗೆ ಸ್ಪಂದಿಸುವುದು

ಮೇಲೆ ತಿಳಿಸಿದ ಶಿಕ್ಷಕಿಯು ಬಳಸುವ ಅಭ್ಯಾಸಗಳು ವಿಭಿನ್ನ ಅಗತ್ಯಕ್ಕೆ ತಕ್ಕಹಾಗೆ ಬೋಧನಾಕ್ರಮವನ್ನು (Differentiated Instruction) ಅಳವಡಿಸುವುದಕ್ಕೆ ಸಂಬಂಧಿಸಿದಂತೆ ಒಳ್ಳೆಯ ಉದಾಹರಣೆಗಳಾಗಿವೆ. ಇದು ಒಂದು ಸಾಮಾನ್ಯ ತರಗತಿಯಲ್ಲಿ ಮಕ್ಕಳ ವ್ಯಕ್ತಿಗತ ಕಲಿಕಾ ಅಗತ್ಯಗಳಿಗೆ ಸ್ಪಂದಿಸಲು ವಿವಿಧ ರೀತಿಯ ಕಾರ್ಯತಂತ್ರಗಳನ್ನು ಬಳಸುವ ಬೋಧನೆಯ ಒಂದು ಕ್ರಮವಾಗಿದೆ.

ಉತ್ತರಾಖಂಡದ ಶಾಲೆಯಲ್ಲಿದ್ದ ಶಿಕ್ಷಕಿಗೆ ಆ ಹೊತ್ತಿನಲ್ಲಿ ಸಹಜವಾಗಿ ಇದು ತಿಳಿದಿರಲಿಲ್ಲ. ತನ್ನ ತರಗತಿಯಲ್ಲಿರುವ ಮಕ್ಕಳಿಗೆ ಮೂಲಭೂತ ಸಾಕ್ಷರತಾ ಕೌಶಲ್ಯಗಳನ್ನು ಅನುಕೂಲಿಸಲು ಪರಿಹಾರಗಳ ಹುಡುಕಾಟದಲ್ಲಿದ್ದಾಗ ಮಕ್ಕಳು ಒಂದೇ ವಯಸ್ಸಿನವರಿದ್ದರೂ ಸಹ ಅವರ ಕಲಿಕಾ ಮಟ್ಟದಲ್ಲಿ ಭಿನ್ನತೆಯಿದೆ ಎಂಬುದನ್ನು ಕಂಡುಕೊಂಡರು. ತಾನು ಎಷ್ಟೇ ಉತ್ತಮವಾಗಿ ಬೋಧಿಸಿದರೂ ಕೆಲವು ಮಕ್ಕಳಷ್ಟೇ ತನ್ನ ಬೋಧನೆಯಿಂದ ಪ್ರಯೋಜನ ಪಡೆಯುತ್ತಾರೆ ಎಂದು ಅರಿತರು. ಹಾಗಾಗಿ ತನ್ನ ತರಗತಿಯಲ್ಲಿರುವ ಎಲ್ಲ ಮಕ್ಕಳ ವೈಯಕ್ತಿಕ ಕಲಿಕಾ ಅಗತ್ಯಗಳಿಗೆ ಪೂರಕವಾಗಿರುವ ಬೋಧನಾ ಕ್ರಮಗಳನ್ನು ಅಳವಡಿಸಿ-ಕೊಳ್ಳಬೇಕಾದುದರ ಅಗತ್ಯವನ್ನು ಅವರು ಮನಗಂಡರು. ವಿಭಿನ್ನ ಅಗತ್ಯಕ್ಕೆ ತಕ್ಕ ಬೋಧನಾಕ್ರಮದ (Differentiated Instruction-DI) ಪ್ರಮುಖ ಪೀಠಿಕೆಯು ಈ ಅಂಶವನ್ನೇ ಆಧರಿಸಿದೆ.

ಈ ಲೇಖನವು ಡಿಐನ ಪ್ರಮುಖ ತತ್ವಗಳನ್ನು ಪರಿಚಯಿಸುತ್ತಿದ್ದು, ಭಾರತದ ತರಗತಿಗಳಿಗೆ ಇದರ ಪ್ರಸ್ತುತತೆ ಹಾಗೂ ಕಾರ್ಯ-ಸಾಧ್ಯತೆಯನ್ನು ವಿವರಿಸಲು ಬೇಕಾದ ಕೆಲವು ಉದಾಹರಣೆಗಳನ್ನು ನೀಡುತ್ತದೆ.

ವಿಭಿನ್ನ ಅಗತ್ಯಕ್ಕೆ ತಕ್ಕ ಬೋಧನಾ ಕ್ರಮದ ಪ್ರಮುಖ ಅಂಶಗಳು

ಒಂದೇ ವಯಸ್ಸಿನ ಅಥವಾ ಸಮಾನ ವಯಸ್ಸಿನ ಮಕ್ಕಳು ಒಂದೇ ಮಾದರಿಯಲ್ಲಿ ಕಲಿಯಬಲ್ಲರು ಮತ್ತು ಅವರಿಗೆ ಒಂದೇ ರೀತಿ ಕಲಿಸಬಹುದು ಎನ್ನುವ ಕಲ್ಪನೆಯನ್ನು 'ಅ.ತ.ಬೋ.ಕ್ರ' (ಡಿಐ) ಪ್ರಶ್ನಿಸುತ್ತದೆ. ಮೊದಲಿಗೆ ಕಾರೋಲ್ ಟಾಮ್‌ಲಿನ್ಸನ್ ಇದನ್ನು ಪ್ರಸ್ತಾಪಿಸಿದ್ದು, ತರಗತಿಯಲ್ಲಿನ ಏಕರೂಪತೆ ಎಂಬ ಕಲ್ಪನೆಯನ್ನು ಡಿಐ ಬೋಧನಾ ಕ್ರಮ ತಳ್ಳಿಹಾಕುತ್ತದೆ ಹಾಗೂ ಜಗತ್ತಿನಾದ್ಯಂತ ಇರುವ ಯಾವುದೇ ಶಾಲೆಯ ಯಾವುದೇ ತರಗತಿಯಲ್ಲಿ ವ್ಯಾಪಕವಾಗಿ ಹರಡಿರುವ ವೈವಿಧ್ಯತೆಯತ್ತ ಶಿಕ್ಷಕರ ಹಾಗೂ ಶಿಕ್ಷಣತಜ್ಞರ ಗಮನವನ್ನು ಸೆಳೆಯುತ್ತದೆ.

ಎಲ್ಲಾ ಶಿಕ್ಷಕರು ತಮ್ಮ ತರಗತಿಯಲ್ಲಿರುವ ಎಲ್ಲ ಮಕ್ಕಳು ಕಲಿಕಾ ಸಾಮರ್ಥ್ಯಗಳಲ್ಲಿ, ಆಸಕ್ತಿಗಳಲ್ಲಿ, ಕಲಿಕೆಗೆ ಬೇಕಾದ ಸಿದ್ಧತೆಯಲ್ಲಿ, ವರ್ತನೆ ಮತ್ತು ಭಾವನಾತ್ಮಕ ಅಗತ್ಯಗಳಲ್ಲಿ ಪರಸ್ಪರ ವಿಭಿನ್ನವಾಗಿದ್ದಾರೆ ಎಂದು ಚೆನ್ನಾಗಿ ಅರಿತಿದ್ದಾರೆ. ಮಕ್ಕಳು ಕೂಡ ವಿಭಿನ್ನ ಸಮಾಜೋ-ಆರ್ಥಿಕ ಹಿನ್ನೆಲೆಗಳನ್ನು ಹೊಂದಿದ್ದು ಭಿನ್ನ ಭಾಷಾ ಆಯ್ಕೆಗಳು, ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭ್ಯಾಸಗಳನ್ನು ಅನುಸರಿಸುತ್ತಾರೆ. ಮಕ್ಕಳು ತರಗತಿಯಲ್ಲಿ ಕಲಿಸುವ ಪಠ್ಯಕ್ರಮವಷ್ಟೇ ಅಲ್ಲದೆ, ತರಗತಿಯಲ್ಲಿ ಅವರ ಸಾಮಾಜಿಕ ಹಾಗು ಭಾವನಾತ್ಮಕ ಸ್ವಾಸ್ಥ್ಯ ಹಾಗು ಹೊಂದಿಕೊಳ್ಳಬೇಕಾದ ಪರಿಸ್ಥಿತಿಯ ಮೇಲೂ ಈ ಎಲ್ಲಾ ಅಂಶಗಳು ಪರಿಣಾಮ ಬೀರುತ್ತವೆ. ಶಿಕ್ಷಕರಾಗಿ ನಮಗೆ ಈ ವ್ಯತ್ಯಾಸಗಳ ಬಗ್ಗೆ ಅರಿವಿದ್ದರೂ, ಮಕ್ಕಳಿಗೆ ಬೋಧಿಸುವುದಕ್ಕೆ ಒಂದೇ ಮಾರ್ಗವಿದೆ ಎಂದು ಭಾವಿಸುತ್ತೇವೆ: ಅದೆಂದರೆ ನಮ್ಮ ಮಾರ್ಗ!

ಈ ಎಲ್ಲ ಅನಿಸಿಕೆಗಳನ್ನು ಪ್ರಶ್ನಿಸುತ್ತಲೇ, ತರಗತಿಯಲ್ಲಿರುವ ಪ್ರತಿಯೊಂದು ಮಗುವಿನ ಕಲಿಕಾ ಅಗತ್ಯಗಳನ್ನು ಪೂರೈಸಲು ಬೇಕಾದ ಬೋಧನೆ, ಕಲಿಕೆ ಹಾಗು ಮೌಲ್ಯಮಾಪನಗಳಿಗೆ ವಿವಿಧ ವಿಧಾನಗಳನ್ನು ಮುಂಚಿತವಾಗಿಯೇ ಆಯೋಜಿಸಿ ಅಳವಡಿಸಿಕೊಳ್ಳಲು ಡಿಐ ಶಿಕ್ಷಕರನ್ನು ಪ್ರೋತ್ಸಾಹಿಸುತ್ತದೆ. ಟಾಮ್‌ಲಿನ್ಸನ್ ಅವರ ಶಬ್ದಗಳಲ್ಲಿ ಹೇಳುವುದಾದರೆ, 'ತರಗತಿಯಲ್ಲಿನ ಅಭ್ಯಾಸಗಳು ಮಕ್ಕಳು ವಿಭಿನ್ನವಾಗಿ ಇದ್ದಾರೆ ಎನ್ನುವ ವಾಸ್ತವವನ್ನು ಪ್ರತಿಯೊಂದು ಮಗುವನ್ನು ಹತ್ತಿರದಿಂದ ಗಮನಿಸುವ ಮೂಲಕ ಮಾಡಬಹುದು ಹಾಗೂ ಅತ್ಯಂತ ಸಮರ್ಥ ಶಿಕ್ಷಕರು ವಿವಿಧ ಹಂತದಲ್ಲಿರುವ ಮಕ್ಕಳನ್ನು ಕಲಿಕೆಯೆಡೆಗೆ ಸೆಳೆಯಲು ಏನು ಬೇಕೋ ಎಲ್ಲ ಕ್ರಮವನ್ನೂ ಅನುಸರಿಸುತ್ತಾರೆ' (ಸಿ.ಎ. ಟಾಮ್‌ಲಿನ್ಸನ್, 2001).

ಬೋಧನೆಗಾಗಿಯೇ ಒಂದು ಸಿದ್ಧಮಾದರಿಯನ್ನು ಡಿಐ ಬೋಧನಾಕ್ರಮ ಒದಗಿಸುವುದಿಲ್ಲವಾದರೂ, ಬೋಧನೆ ಹಾಗೂ ಕಲಿಕೆಯೆಡೆಗೆ ಇರುವ ತಾರ್ಕಿಕ ನೆಲೆಗಟ್ಟು ಅಥವಾ ಚಿಂತನೆಗೆ ಹಚ್ಚುವ ಮಾರ್ಗವೆಂದು ಒತ್ತಿ ಹೇಳುತ್ತಾ, ಬೋಧನೆಗೆ ಯಾವುದೇ ಸೂತ್ರಗಳನ್ನು ಸೂಚಿಸುವುದಿಲ್ಲ, ಆದರೆ ತರಗತಿಯ ಎಲ್ಲ ಮಕ್ಕಳ ಸಾಮರ್ಥ್ಯಗಳನ್ನು ಹೆಚ್ಚಿಸಲು ಬೇಕಾದ ವಿಚಾರಗಳನ್ನು ಶಿಕ್ಷಕರಿಗೆ ಕಟ್ಟಿಕೊಡುತ್ತದೆ ಎಂದು ಟಾಮ್‌ಲಿನ್ಸನ್ ಸ್ಪಷ್ಟಪಡಿಸುತ್ತಾರೆ. ಶಿಕ್ಷಕರು ಒಂದೇ ಪಾಠ ಅಥವಾ ಘಟಕದಿಂದ ಸಿದ್ಧಪಡಿಸಿ ನೀಡುವ ಕಾರ್ಯಗಳನ್ನು ಮಕ್ಕಳು ಪಠ್ಯಕ್ರಮವನ್ನು ಅನ್ವೇಷಿಸುವುದರ ಮೂಲಕ ಹಾಗು ವಿವಿಧ ಹಂತಗಳಲ್ಲಿ ಕಾರ್ಯಗಳನ್ನು ಪೂರೈಸಿ ತಮ್ಮ ಕಲಿಕೆಯನ್ನು ಪ್ರಸ್ತುತಪಡಿಸುವುದಕ್ಕೆ ವಿವಿಧ ರೀತಿಯ ಅವಕಾಶಗಳನ್ನು ಡಿಐ ಬೋಧನಾಕ್ರಮ ಒದಗಿಸುತ್ತದೆ ಎನ್ನುವುದರಲ್ಲಿಯೇ ಅದರ ಸಾರ ಅಡಗಿದೆ. ಈ ನಿಟ್ಟಿನಲ್ಲಿ ಕೆಲಸ ಮಾಡಲು ಶಿಕ್ಷಕಿಯು ತನ್ನ ತರಗತಿಯಲ್ಲಿರುವ ಎಲ್ಲ ಮಕ್ಕಳ ವೈಯಕ್ತಿಕ ಸಾಮರ್ಥ್ಯಗಳು ಹಾಗು ಕಲಿಕಾ ಅಗತ್ಯಗಳನ್ನು ಒರೆಗೆ ಹಚ್ಚಿ ಇದರ ಆಧಾರದ ಮೇಲೆ ವಿಷಯವಸ್ತು, ಪ್ರಕ್ರಿಯೆ, ಫಲಿತ ಹಾಗು ಕಲಿಕಾ ವಾತಾವರಣವನ್ನು ಮಾರ್ಪಡಿಸುತ್ತಾರೆ.

ವಿಷಯವಸ್ತುವು ವಿದ್ಯಾರ್ಥಿಗಳು ಏನನ್ನು ಕಲಿಯಬೇಕೆಂದು ಅಪೇಕ್ಷಿಸುತ್ತಾರೆ ಹಾಗು ಇದಕ್ಕಾಗಿ ಬೇಕಾದ ಸಂಪನ್ಮೂಲಗಳು ಮತ್ತು ಕಾರ್ಯವಿಧಾನಗಳಿಗೆ ವಿಷಯವಸ್ತು ಎಂದು ಕರೆಯಲಾಗುತ್ತದೆ. ಶಿಕ್ಷಕಿಯು ವಿಷಯವನ್ನು ಪರಿಣಾಮ-ಕಾರಿಯಾಗಿ ನಿರ್ವಹಿಸಲು ಬೇಕಾದ ಬೋಧನಾ ತಂತ್ರಗಳನ್ನು ಅಳವಡಿಸಿಕೊಳ್ಳುವುದನ್ನು ಪ್ರಕ್ರಿಯೆ ಎನ್ನುತ್ತಾರೆ. ಮಕ್ಕಳು ತಮ್ಮ ಕಲಿಕೆಯನ್ನು ವಿವಿಧ ರೀತಿಯಲ್ಲಿ ಪ್ರಸ್ತುತಪಡಿಸುವುದೇ ಫಲಿತ. ಕಲಿಕಾ ವಾತಾವರಣ ಶಿಕ್ಷಕಿಯು ತನ್ನ ತರಗತಿಯಲ್ಲಿರುವ ಎಲ್ಲ ಮಕ್ಕಳಿಗೆ ಒಂದು ಗೌರವಯುತವಾದ ಹಾಗೂ ಸುರಕ್ಷಿತವಾದ ಪರಿಸರವನ್ನು ಒದಗಿಸಲು ಮಾಡುವ ಮಾರ್ಪಾಡುಗಳಾಗಿದ್ದು, ಆ ಮೂಲಕ ಮಕ್ಕಳು ತಮ್ಮ ವೈಯಕ್ತಿಕ ಸಾಮರ್ಥ್ಯಕ್ಕೆ ಅನುಗುಣವಾದ ಗತಿಯಲ್ಲಿ ಹಾಗು ಕಲಿಕಾ ಮಟ್ಟದ ಆಧಾರದ ಮೇಲೆ ತಮ್ಮನ್ನು ತಾವು ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳುವುದು ಎಂಬುದರ ಸೂಚಕವಾಗಿದೆ.

ಇದೆಲ್ಲವನ್ನೂ ಮಾಡುವಾಗ ಶಿಕ್ಷಕಿಯು ತನ್ನ ತರಗತಿಯ ಎಲ್ಲ ವಿದ್ಯಾರ್ಥಿಗಳ ಒಟ್ಟಾರೆ ಬೆಂಬಲದ ಮೇಲೆ ಹೆಚ್ಚಾಗಿ ಅವಲಂಬಿತರಾಗಿರುತ್ತಾರೆ. ವಿದ್ಯಾರ್ಥಿಗಳು ಆಯ್ದುಕೊಳ್ಳುವ ಸಂಪನ್ಮೂಲಗಳ ವಿಷಯದಲ್ಲಿ, ಕಾರ್ಯಗಳಲ್ಲಿ ಹಾಗು ಕೆಲಸದ ವೇಗದಲ್ಲಿ ನಮ್ಯತೆಯನ್ನು ಖಚಿತಪಡಿಸುವುದಲ್ಲದೆ, ಬಹು-ಮುಖ್ಯವಾಗಿ ಎಲ್ಲ ಮಕ್ಕಳು ಸಮಾನವಾಗಿ ಗೌರವಿಸಲು ಸಹಪಾಠಿಗಳು, ಮತ್ತು ಶಿಕ್ಷಕರು ಇಬ್ಬರಿಂದಲೂ ಸಮಾನ ಮಹತ್ವವುಳ್ಳದ್ದು ಎಂದು ಭಾವಿಸುವ ಚಟುವಟಿಕೆಗಳಲ್ಲಿ ತೊಡಗಿ-ಕೊಳ್ಳುತ್ತಾರೆ ಎಂಬುದನ್ನು ಖಚಿತಪಡಿಸುತ್ತಾರೆ.

ತರಗತಿಯಲ್ಲಿ ವಿಭಿನ್ನ ಅಗತ್ಯಕ್ಕೆ ತಕ್ಕ ಬೋಧನಾ ಕ್ರಮವನ್ನು ಅಳವಡಿಸುವುದು

ಈ ಮೊದಲೇ ಹೇಳಿದಂತೆ ವಿಭಿನ್ನ ಅಗತ್ಯಕ್ಕೆ ತಕ್ಕಂತೆ ಬೋಧನಾ ಕ್ರಮವು ತರಗತಿಯಲ್ಲಿ ಅಳವಡಿಸಿಕೊಳ್ಳಲು ಬೇಕಾದ ಬೋಧನಾ ಕಾರ್ಯತಂತ್ರಗಳ ಸಾಧನವಲ್ಲ. ಇದಕ್ಕೆ ವಿರುದ್ಧವಾಗಿ ಹೇಳಬೇಕೆಂದರೆ ಈ ಬೋಧನಾ ಕ್ರಮದ ಮೂಲತತ್ವ ಅದರ ನಮ್ಯತೆ ಹಾಗೂ ಶಿಕ್ಷಕಿಯು ತನ್ನ ತರಗತಿಯ ವಿದ್ಯಾರ್ಥಿಗಳ ನಿರ್ದಿಷ್ಟ ಅಗತ್ಯಗಳನ್ನು ಗುರುತಿಸುವ ಸಾಮರ್ಥ್ಯ ಹೊಂದಿ ಈ ಬೋಧನಾ ಕ್ರಮದ ಪ್ರಮುಖ ಅಂಶಗಳನ್ನೊಳಗೊಂಡ ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಅಡಗಿದೆ. ಈ ವಿಭಾಗದಲ್ಲಿ, ಈ ಬೋಧನಾ ಕ್ರಮದ ತಂತ್ರಗಳಿಗೆ ಸಂಬಂಧಿಸಿದ ಕೆಲವು ಉದಾಹರಣೆಗಳನ್ನು ವಿವರಿಸಲಾಗಿದೆ. ಮಕ್ಕಳ ನಿರ್ದಿಷ್ಟ ಅಗತ್ಯಗಳು, ಶಿಕ್ಷಕಿಗೆ ಲಭ್ಯವಿರುವ ಸಂಪನ್ಮೂಲಗಳು, ತರಗತಿಯ ಗಾತ್ರ ಹಾಗು ಶಿಕ್ಷಕಿಯು ತೊಡಗಿಸಿಕೊಳ್ಳಬಹುದಾದ ಅವಧಿ ಮತ್ತು ಅವರ ತಯಾರಿಗೆ ಬೇಕಾದ ಸಮಯವನ್ನು ಅವಲಂಬಿಸಿ ಇವುಗಳನ್ನು ಯಾವುದೇ ತರಗತಿಯಲ್ಲಿ ಅನ್ವಯಿಸಬಹುದು. ಅಂತಹ ಒಂದು ತಂತ್ರವೆಂದರೆ ವಿದ್ಯಾರ್ಥಿಗಳು ಒಂದೇ ಸಮಯದಲ್ಲಿ ವಿವಿಧ ಕಾರ್ಯಗಳನ್ನು ನಿರ್ವಹಿಸುವುದು. ಶಿಕ್ಷಕಿಯು ಮಿಶ್ರ ಸಾಮರ್ಥ್ಯವುಳ್ಳ ಗುಂಪುಗಳಿಗೆ ಮಕ್ಕಳನ್ನು ನಿಯೋಜಿಸಿ ವಿವಿಧ ಆಸಕ್ತಿಗಳ ಹಂತಗಳಲ್ಲಿರುವವರಿಗೆ ಇಷ್ಟವಾಗುವಂತೆ ಹಾಗು ತಾನು ನೀಡುವ ಕಾರ್ಯಗಳನ್ನು ಪೂರೈಸುವುದಕ್ಕೆ ಅಗತ್ಯವಿರುವ ವಿಭಿನ್ನ ಕೌಶಲ್ಯಗಳನ್ನು ಹೊಂದಿರುವವರನ್ನೊಳಗೊಂಡ ಗುಂಪುಗಳಾಗಿ ರಚಿಸಬಹುದು. ಮಕ್ಕಳಿಗೆ ಈ ಕಾರ್ಯಗಳಲ್ಲಿ ಎಲ್ಲವನ್ನೂ ಅಥವಾ ಇವುಗಳಲ್ಲಿ ಕೆಲವನ್ನು ತಮ್ಮದೇ ಗತಿಯಲ್ಲಿ ಮಾಡುವಂತೆ, ಸಹವರ್ತಿಗಳ ಸಹಾಯದೊಂದಿಗೆ ಹಾಗು ತಮಗೆ ಆಸಕ್ತಿ ಇದ್ದಾಗ ಕೈಗೊಳ್ಳಲು ಪ್ರೋತ್ಸಾಹಿಸಬಹುದು. ಉದಾಹರಣೆಗೆ, 6ನೇ ತರಗತಿಯ ಇತಿಹಾಸದ ಪಾಠಕ್ಕೆ ಶಿಕ್ಷಕಿಯು ವಿವಿಧ ಸ್ತರದ ಕಾರ್ಯಗಳನ್ನು ರೂಪಿಸಬಹುದು. ಮೊದಲನೆಯದಾಗಿ ಮಕ್ಕಳು ಪಠ್ಯಪುಸ್ತಕದಲ್ಲಿರುವ ಪಾಠದಿಂದ ಘಟನಾವಳಿಗಳನ್ನು ಆಧರಿಸಿದ ವಾಸ್ತವಾಂಶಗಳನ್ನು ಹುಡುಕಿ ತೆಗೆದು ಆನಂತರ ಪಠ್ಯದಲ್ಲಿ ಇರುವಂತೆ ಘಟನೆಗಳ ಕಾಲಾನುಕ್ರಮದಲ್ಲಿ ಒಂದು ಪರಿಕಲ್ಪನಾತ್ಮಕ

ನಕ್ಷೆಯನ್ನು ರಚಿಸಬಹುದು. ಒಂದು ನಿರ್ದಿಷ್ಟ ವಿಷಯದ ಬಗ್ಗೆ ಹೆಚ್ಚುವರಿ ವಿಷಯಗಳನ್ನು ಪಠ್ಯಪುಸ್ತಕದಿಂದಾಚೆ ಹುಡುಕಿ ತೆಗೆದು ತರಗತಿಯ ಎದುರು ಒಂದು ಪ್ರಾತ್ಯಕ್ಷಿಕೆಯನ್ನು ನೀಡುವುದು ಇನ್ನೊಂದು ಕಾರ್ಯವಾಗಬಹುದು. ಮತ್ತೊಂದು ಕಾರ್ಯವೆಂದರೆ ಪಠ್ಯಕ್ಕೆ ಸಂಬಂಧಪಟ್ಟ ವಿಷಯದ ಸಾರವನ್ನು ಲಿಖಿತರೂಪದಲ್ಲಿ ಟಿಪ್ಪಣಿ ಮಾಡುವುದು ಅಥವಾ ವಿದ್ಯಾರ್ಥಿಗಳು ಈ ಪಠ್ಯವನ್ನು ಒಂದು ನಾಟಕವಾಗಿ ಅಭಿನಯಿಸುವುದು ಅಥವಾ ಹಾಸ್ಯ ಚಿತ್ರಸರಣಿಗಳನ್ನು ತಯಾರಿಸುವ ಮುಖಾಂತರ ಪ್ರಸ್ತುತಪಡಿಸಲು ಹೇಳಿ ಪ್ರೋತ್ಸಾಹಿಸಬಹುದು!

ಈ ರೀತಿಯ ವಿಭಿನ್ನ ಚಟುವಟಿಕೆ ಕಾರ್ಯಗಳನ್ನು ರೂಪಿಸಿದಾಗ ವಿವಿಧ ಮಟ್ಟದ ಆಸಕ್ತಿ ಹೊಂದಿರುವ ಹಾಗೂ ಬಹುವಿಧ ಸಾಮರ್ಥ್ಯವಿರುವ ಮಕ್ಕಳು ತಮಗೆ ಇಷ್ಟವಿರುವ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶ ಪಡೆಯುವುದಲ್ಲದೆ, ವಿಭಿನ್ನ ರೀತಿಯಲ್ಲಿ ತಮ್ಮ ಕೌಶಲ ಹಾಗು ಸಾಮರ್ಥ್ಯಗಳನ್ನು ಪ್ರದರ್ಶಿಸುವುದಕ್ಕೆ ಸಾಧ್ಯವಾಗುವಂತೆ ಶಿಕ್ಷಕಿಯು ಖಚಿತ ಪಡಿಸಿಕೊಳ್ಳುವಂತಾಗುತ್ತದೆ. ಮೌಲ್ಯಮಾಪನವು ಇಂತಹ ಕಾರ್ಯಗಳೊಂದಿಗೆ ನಿಕಟವಾದ ಸಂಬಂಧ ಹೊಂದಿದ್ದು ಮಗುವಿನ ಕಲಿಕೆಗೆ ಸಂಬಂಧಿಸಿದಂತೆ ವಿವಿಧ ರೀತಿಗಳಲ್ಲಿ ಆಗುತ್ತದೆ ಎನ್ನುವುದನ್ನೂ ಖಚಿತಪಡಿಸುತ್ತದೆ.

ಈ ಹಂತದಲ್ಲಿ ಶಿಕ್ಷಕಿಗೆ ಇದನ್ನು ಆಯೋಜಿಸಿ ಕೈಗೊಳ್ಳುವುದು ಪ್ರಯಾಸಕರ ಎಂದೆನಿಸಿದರೂ ವಾಸ್ತವದಲ್ಲಿ ಇದು ಅಷ್ಟು ಕಷ್ಟಕರವಲ್ಲ. ಮುಂಚಿತವಾಗಿಯೇ ಇದಕ್ಕೆ ಸ್ವಲ್ಪಮಟ್ಟಿನ ತಯಾರಿಯ ಆಯೋಜನೆಯ ಅಗತ್ಯವಿದ್ದರೂ, ಆನಂತರ ಈ ತರಹದ ತರಗತಿ ಅಭ್ಯಾಸಗಳು ಶಿಕ್ಷಕರ ಮಟ್ಟಿಗೆ ಕನಿಷ್ಠ ಮಧ್ಯಸ್ಥಿಕೆಯನ್ನು ಬೇಡುತ್ತದೆ. ಏಕೆಂದರೆ ಇದರ ಸಾರವೇ ಓರಗೆಯವರೊಡನೆ ಕಲಿಕೆ ಹಾಗು ಸಹಕಾರದಲ್ಲಿದೆ. ಜೊತೆಗೆ ಈ ತರಹದ ಕಾರ್ಯಗಳನ್ನು ಮೊದಲು ಪರಿಚಯಿಸಿದಾಗ ಸ್ವಲ್ಪಮಟ್ಟಿನ ಗದ್ದಲ ಹಾಗು ಶಿಷ್ಟಾಚಾರದ ಕೊರತೆಯ ಸ್ಥಿತಿ ಎದುರಾಗಬಹುದು. ಇದನ್ನು ನಿಭಾಯಿಸಲು ಶಿಕ್ಷಕಿ ಸಿದ್ಧರಿರಬೇಕು. ಆದರೂ ವಿದ್ಯಾರ್ಥಿಗಳು ಶಿಕ್ಷಣಾತ್ಮಕ ಹಾಗೂ ಶಿಕ್ಷಕರ ನೇತೃತ್ವವೇ ಪ್ರಧಾನವಾಗಿರದ ಬೋಧನಾ ವಿಧಾನದ ಕಲ್ಪನೆಗೆ ಒಮ್ಮೆ ಹೊಂದಿಕೊಂಡರೆಂದರೆ, ತಮ್ಮ ಕಲಿಕೆಯ ಜವಾಬ್ದಾರಿಯನ್ನು ತಾವಾಗಿಯೇ ಹೊತ್ತುಕೊಳ್ಳಲು ಕಲಿಯುತ್ತಾರೆ ಮತ್ತು ಶಿಸ್ತುಬದ್ಧರಾಗುತ್ತಾರೆ. ಇನ್ನೊಂದು ಗಮನಿಸಬೇಕಾದ ಅಂಶವೆಂದರೆ ಸಮೃದ್ಧ ಸಂಪನ್ಮೂಲಗಳು ಇಲ್ಲದಿರುವ ತರಗತಿಗಳಲ್ಲಿಯೂ ಈ ರೀತಿಯ ಅಭ್ಯಾಸಗಳನ್ನು ಅಳವಡಿಸಿ–ಕೊಳ್ಳಬಹುದು. ಆಸನಗಳ ವ್ಯವಸ್ಥೆಯನ್ನು ಮರುರೂಪಿಸುವುದು ಹಾಗೂ ಶಾಲೆಯೊಳಗಿನ ಮತ್ತು ಹೊರಗಿನ ಸ್ಥಳಗಳನ್ನು ಉತ್ತಮವಾಗಿ ಬಳಸಿಕೊಂಡು ಪೂರಕ ಕಲಿಕಾ ವಾತಾವರಣವನ್ನು ನಿರ್ಮಿಸುವುದು ಈ ರೀತಿಯ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸುವ ನಿಟ್ಟಿನಲ್ಲಿ ಬಹಳ ಸಹಾಯ ಮಾಡುತ್ತದೆ.

ತರಗತಿಯಲ್ಲಿ ವಿಭಿನ್ನ ಬೋಧನಾ ಕ್ರಮಗಳನ್ನು ಅಗತ್ಯವಿರುವಂತೆ ಅಳವಡಿಸಿಕೊಳ್ಳುವುದು

ಶಿಕ್ಷಕರು ಯಾವುದೇ ವಿಷಯದಲ್ಲಿಯೇ ಆಗಲಿ ಯಾವುದೇ ಹಂತದಲ್ಲಿಯೇ ಆಗಲಿ ತಮ್ಮ ಪಾಠಗಳನ್ನು ಆಯೋಜಿಸುವಾಗ ಈ ಕೆಳಗೆ ಕೊಟ್ಟಿರುವ ಕೆಲವು ತತ್ವಗಳನ್ನು/ತಂತ್ರಗಳನ್ನು ಗಮನದಲ್ಲಿಟ್ಟು ಕೊಳ್ಳಬಹುದಾಗಿದೆ:

ಮುಖ್ಯ ಪರಿಕಲ್ಪನೆಗಳನ್ನು ಗುರುತಿಸುವುದು

ಯಾವುದೇ ವಿಷಯದಲ್ಲಿ ಕಲಿಯಬೇಕಾದ ಮುಖ್ಯ ಪರಿಕಲ್ಪನೆಗಳನ್ನು ಗುರುತಿಸಿ ಕೇಂದ್ರೀಕರಿಸಿದಾಗ, ಶಿಕ್ಷಕಿಯು ಕಲಿಸಬೇಕಾದ ವಸ್ತುವಿಷಯವನ್ನು ಗಣನೀಯವಾಗಿ ಕಡಿತಗೊಳಿಸಬಹುದು. ದೊಡ್ಡ ಪ್ರಮಾಣದ ಪಠ್ಯ ಭಾಗವನ್ನು ಓದುವುದಕ್ಕೆ ಕಷ್ಟಪಡುವ, ಅಂದರೆ ಕಲಿಕಾ ನ್ಯೂನತೆ ಹೊಂದಿರುವಂತಹ ಕೆಲವು ವಿದ್ಯಾರ್ಥಿಗಳಿಗೆ ಇದರಿಂದ ಉಪಯೋಗವಾಗುತ್ತದೆ. ಪ್ರತಿಯೊಂದು ಪಾಠವನ್ನು ಕಲಿಸುವಾಗ ಮುಖ್ಯಾಂಶಗಳನ್ನು ಗುರುತಿಸುವುದು/ಒತ್ತು ಕೊಡುವುದು, ಕೆಳಗೆ ಗೆರೆ ಎಳೆಯುವ ಮೂಲಕ ಅದಕ್ಕೆ ಮುಖ್ಯವಾದ ಪದಗಳನ್ನು ಪಟ್ಟಿ ಮಾಡುವುದು ಹಾಗೂ ಮುಖ್ಯ ಅಂಶಗಳನ್ನು ಮಿಂಚುಪಟ್ಟಿಯ ಮೂಲಕ ಪ್ರದರ್ಶಿಸುವುದು ಈ ಕಾರ್ಯವನ್ನು ಸುಲಭವಾಗಿ ಅನುಕೂಲಿಸಬಹುದಾದ ಮಾರ್ಗಗಳಾಗಿವೆ.

ವಿಭಿನ್ನ ವಿಧಾನಗಳ ಮೂಲಕ ವಿಷಯವನ್ನು ಪ್ರಸ್ತುತಪಡಿಸುವುದು, ಅನುಭವಾತ್ಮಕ ಕಲಿಕೆಯನ್ನು ಉತ್ತೇಜಿಸುವುದು

ಶಿಕ್ಷಕರ ನೇತೃತ್ವದ, ಉಪನ್ಯಾಸ ಆಧಾರಿತ ಬೋಧನಾ ವಿಧಾನಕ್ಕಾಗಿ ಭರಿಸುವ ಸಮಯವನ್ನು ಕಡಿತಗೊಳಿಸುವ ಮೂಲಕ ಶಿಕ್ಷಕರು ವಿಷಯವನ್ನು ಅಳವಡಿಸಿಕೊಳ್ಳಬಹುದು ಮತ್ತು ಅದನ್ನು ದೃಶ್ಯ ಐಂದ್ರೀಯ ಅಥವಾ ಆಂಗಿಕ ಚಲನ ಹಾಗೂ ಶ್ರವಣ ವಿಧಾನಗಳ ಮೂಲಕ ಪ್ರಸ್ತುತಪಡಿಸಬಹುದು. ಇದು ಮಾದರಿಗಳು, ವಿಡಿಯೋ, ಚಾರ್ಟ್, ಹಾಗೂ ಪೋಸ್ಟರ್‌ಗಳು ಅಥವಾ ಆಡಿಯೋ ತುಣುಕುಗಳ ರೂಪದಲ್ಲಿಯೂ ಇರಬಹುದು. ವಿವಿಧ ಆಸಕ್ತಿ ಮಟ್ಟಗಳನ್ನು ಹಾಗು ಕಲಿಕಾ ಹಿನ್ನೆಲೆಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಈ ರೀತಿಯ ಪರ್ಯಾಯ ವಿಧಾನಗಳು ಆಕರ್ಷಕವಾಗಿರುತ್ತವೆ. ವಿದ್ಯಾರ್ಥಿಗಳು ಕಲಿಕೆಯನ್ನು ನೇರವಾಗಿ ಪಡೆದು ಅನುಭವಿಸುವುದಕ್ಕೆ ಹಾಗು ತಮ್ಮದೇ ಆದ ಅರ್ಥಗಳನ್ನು ಹುಡುಕಿಕೊಳ್ಳುವುದಕ್ಕೆ ಇದು ಅನುವು ಮಾಡಿಕೊಡುತ್ತದೆ. ತರಗತಿಯ ಬೇರೆಬೇರೆ ಜಾಗಗಳಲ್ಲಿ ಸಜ್ಜುಗೊಳಿಸುವುದರ ಮೂಲಕ ಇದನ್ನು ಮಾಡಬಹುದು. ವಿದ್ಯಾರ್ಥಿಗಳು ಒಂದು ಕೇಂದ್ರದಿಂದ ಮತ್ತೊಂದು ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿ ಪ್ರದರ್ಶಿಸಲಾದ ಪರಿಕರಗಳೊಂದಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಅವರನ್ನು ಪ್ರೋತ್ಸಾಹಿಸಬಹುದು.

ವಿದ್ಯಾರ್ಥಿಯ ಕಲಿಕೆಯ ಗತಿಯನ್ನು ಬದಲಾಯಿಸುವುದು ಹಾಗೂ ಮೌಲ್ಯಮಾಪನಕ್ಕಾಗಿ ವಿವಿಧ ನಿಯಮಗಳನ್ನು ಪರಿಚಯಿಸುವುದು.

ಪ್ರತಿಯೊಂದು ಮಗುವಿನ ಬಲಾಬಲಗಳನ್ನು ಅರ್ಥಮಾಡಿಕೊಂಡು ದೌರ್ಬಲ್ಯವಿರುವ ಕ್ಷೇತ್ರದಲ್ಲಿ ಸಶಕ್ತನನ್ನಾಗಿ ಮಾಡುವುದರ ಮೇಲೆ ಗಮನಹರಿಸಲು ಶಿಕ್ಷಕಿಯು ಯಾವುದೇ ವಿಷಯವನ್ನು ಕುರಿತಂತೆ ಬಹುಸ್ತರ ಮೌಲ್ಯಮಾಪನ ವಿಧಾನವನ್ನು ರೂಪಿಸಬಹುದು. ವಿದ್ಯಾರ್ಥಿಗಳು ಆರಾಮದಾಯಕವಾಗಿ ಕೊಟ್ಟ ಕಾರ್ಯಗಳನ್ನು ನಿರ್ವಹಿಸಲು ಅವರ ಸಿದ್ಧತಾ ಹಂತ ಹಾಗೂ ಗತಿಯನ್ನು ಆಧರಿಸಿ ಅವರನ್ನು ತೊಡಗಿಸಬಹುದು. ಒಮ್ಮೆ ಮಗುವು ಕಲಿಕಾ ಉದ್ದೇಶವನ್ನು ಸಾಧಿಸಿದ ನಂತರ ಮುಂದಿನ ಹಂತದ ಮೌಲ್ಯಮಾಪನಕ್ಕೆ ಒಳಪಡಿಸಬಹುದು. ಎಲ್ಲ ವಿದ್ಯಾರ್ಥಿಗಳು ಮೌಲ್ಯಮಾಪನದ ಎಲ್ಲಾ ಹಂತಗಳನ್ನು ಸಾಧಿಸಬೇಕೆನ್ನುವುದು ಅಗತ್ಯವಿಲ್ಲ.

ವಿವಿಧ ಹಂತಗಳ ಕಲಿಕೆಗೆ ಬೆಂಬಲವನ್ನೊದಗಿಸುವುದು

ವಿವಿಧ ಹಂತದ ಸಿದ್ಧತೆ ಹಾಗೂ ಕಲಿಕಾ ಮಟ್ಟವನ್ನನುಸರಿಸಿದಂತೆ ವ್ಯಕ್ತಿಗತ ಬೋಧನೆ ಹಾಗೂ ಮಕ್ಕಳಿಗೆ ಬೆಂಬಲದ ಅಗತ್ಯವಿರುತ್ತದೆ. ಅಗತ್ಯವಿರುವ ವಿದ್ಯಾರ್ಥಿಗಳಿಗಷ್ಟೇ ಆಳವಾದ, ನಿರ್ದಿಷ್ಟ ವಿಧಾನದ ಬೋಧನೆಯನ್ನು ಅನುಕೂಲಿಸುವುದರ ಮೂಲಕ ಶಿಕ್ಷಕರು ಸಮಯ ಹಾಗೂ ಶ್ರಮವನ್ನು ಉಳಿಸಬಹುದು. ಇತರ ಮಕ್ಕಳು ಸ್ವಂತವಾಗಿ ಹಾಗೂ ಸಹಪಾಠಿಗಳ ಬೆಂಬಲದೊಂದಿಗೆ ಕಲಿಯುತ್ತಾರಾದರೆ, ಅವರನ್ನು ಆ ನಿಟ್ಟಿನಲ್ಲಿಯೇ ಪ್ರೋತ್ಸಾಹಿಸಬೇಕು. ಈ ರೀತಿಯ ಕಾರ್ಯವಿಧಾನಗಳು ತರಗತಿಗಳಲ್ಲಿ ಶಿಕ್ಷಕರು ತಮ್ಮ ಸಮಯವನ್ನು ಉತ್ತಮವಾಗಿ ಬಳಸುವುದಕ್ಕೆ ಹಾಗು ವಿದ್ಯಾರ್ಥಿಗಳು ಸ್ವತಂತ್ರ ಕಲಿಕಾರ್ಥಿಗಳಾಗುವುದಕ್ಕೆ ಸಹಾಯಮಾಡುತ್ತವೆ. ಇವು ಪರಸ್ಪರ ಮಕ್ಕಳಲ್ಲಿ ಸಂವೇದನಾಶೀಲತೆಯನ್ನು ಬೆಳೆಸುವುದಕ್ಕೂ ಹಾಗು ಸಹಪಾಠಿಗಳೊಂದಿಗಿನ ಸಂಬಂಧಗಳನ್ನು ಬೆಳೆಸುವುದಕ್ಕೂ ಸಹಾಯ ಮಾಡುತ್ತವೆ.

ಈ ರೀತಿಯ ಪ್ರತಿಯೊಂದು ಅಭ್ಯಾಸ ಅಥವಾ ಶಿಫಾರಸಿನ ಮೂಲವಾಗಿ ಒಳಗೊಳ್ಳುವಿಕೆಯೆಡೆಗೆ ಒಂದು ದೃಢವಾದ ಬದ್ಧತೆ ಇರುತ್ತದೆ. ಮಕ್ಕಳ ಸಾಮರ್ಥ್ಯ ಹಾಗು ಆಸಕ್ತಿಗಳಲ್ಲಿರುವ ವೈಯಕ್ತಿಕ ಭಿನ್ನತೆಯು, ಪ್ರತಿಯೊಂದು ತರಗತಿ, ಪ್ರತಿಯೊಂದು ಸನ್ನಿವೇಶದಲ್ಲಿಯೂ ಒಂದು ಅನಿವಾರ್ಯವಾದ ವಾಸ್ತವ ಎಂಬ ನಂಬಿಕೆಯನ್ನು ಅರ್ಥ ಮಾಡಿಕೊಳ್ಳಬೇಕಿರುವುದೂ ಬಹು ಮುಖ್ಯ.

ಕೊನೆಯ ಮಾತು

ದೇಶದಲ್ಲಿರುವ ಬಹುತೇಕ ಶಾಲೆಗಳ ಶೋಚನೀಯ ಪರಿಸ್ಥಿತಿಯನ್ನು ಅವಲೋಕಿಸಿ ನೋಡಿದಾಗ ವಿಭಿನ್ನ ಅಗತ್ಯಕ್ಕೆ ತಕ್ಕ ಬೋಧನಾ ಕ್ರಮವನ್ನು ಭಾರತೀಯ ಸನ್ನಿವೇಶದಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಹಲವಾರು ಪ್ರಶ್ನೆಗಳು ಏಳಬಹುದು. ಆದಾಗ್ಯೂ ಈ ಬೋಧನಾ ಕ್ರಮ ಒಂದು ಬಹುಮುಖಿ ವಿಧಾನವಾಗಿದ್ದು, ತರಗತಿಯ ಬೋಧನಾ ವಿಧಾನವನ್ನು ಮರು ರೂಪಿಸುವುದಕ್ಕೆ ಒಂದು ಮಾರ್ಗವಾಗಿದೆ. ಆದರೆ ಇದು ಒಂದು ಕಟ್ಟುನಿಟ್ಟಾದ ಅಭೇದ್ಯ ಮಾದರಿಯಲ್ಲ ಎಂದು ಅರ್ಥಮಾಡಿಕೊಳ್ಳುವುದು ಮುಖ್ಯ. ಮಕ್ಕಳ ಕಲಿಕೆಯ ವಿಷಯದಲ್ಲಿ ಹೇಗೆ ಒಂದೇ ಅಳತೆ ಎಲ್ಲರಿಗೂ ಹೊಂದುವುದಿಲ್ಲವೋ, ನಮ್ಮ ಪರಿಸ್ಥಿತಿಗಳಿಗೆ ಪೂರಕವಾಗಿ ಹಾಗೂ ಕಡಿಮೆ ಸಂಪನ್ಮೂಲಗಳುಳ್ಳ ಮತ್ತು ಕಿಕ್ಕಿರಿದ ತರಗತಿಗಳ ವಾಸ್ತವದ ಅರಿವಿನಿಂದಲೇ ವಿಭಿನ್ನ ಬೋಧನಾಕ್ರಮದ ತತ್ವಗಳನ್ನು ಮಾರ್ಪಡಿಸಿಕೊಂಡು ಅಳವಡಿಸಿಕೊಳ್ಳದಿರಲು ಯಾವುದೇ ಕಾರಣವಿಲ್ಲ. ಅದಕ್ಕಾಗಿಯೇ ಉತ್ತರಾಖಂಡದ ಶಾಲಾ ತರಗತಿಯ ಪ್ರತಿಯೊಂದು ಗೋಡೆಯ ಒಂದೊಂದು ಇಂಚು ಮತ್ತು ಒಂದೊಂದು ಕಾಗದದ ತುಣುಕೂ, ಸೀಮೆಸುಣ್ಣವೂ ಮಕ್ಕಳು ಕೆಲಸ ಮಾಡಲು, ಸೂಕ್ತ ಚಟುವಟಿಕೆಗಳನ್ನು ರೂಪಿಸುವುದಕ್ಕೆ ಹಾಗು ಮೌಲ್ಯಮಾಪನವನ್ನು ಕೈಗೊಳ್ಳಲು ಉಪಯೋಗಿಸಲ್ಪಟ್ಟಿವೆ. ಹೀಗಾಗಿಯೇ ವಿಭಿನ್ನ ಅಗತ್ಯಕ್ಕೆ ತಕ್ಕ ಬೋಧನಾಕ್ರಮದ ಹಾಗು ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಬೇಕಾದ ಸ್ಫೂರ್ತಿ ಮತ್ತು ಪ್ರೇರಣೆಯನ್ನು ಪಡೆಯುವುದಕ್ಕೆ ಭಾರತದಲ್ಲಿನ ತರಗತಿಗಳು ಈ ಶಾಲೆಯನ್ನು ಒಂದು ಉದಾಹರಣೆಯಾಗಿ ನೋಡಬೇಕು.

ಆಕರಗಳು ಮತ್ತು ಹೆಚ್ಚಿನ ಓದಿಗಾಗಿ

Tomlinson, C. A. (2001). How to Differentiate Instruction in Mixed Ability Classrooms, ASCD.



ಅಂಕುರ್ ಮದನ್ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಬೋಧಿಸುತ್ತಾರೆ. ಮಗುವಿನ ಬೆಳವಣಿಗೆ ಹಾಗು ಸಮನ್ವಯ ಶಿಕ್ಷಣ, ಅವರ ಬೋಧನೆ ಮತ್ತು ಸಂಶೋಧನಾ ಕ್ಷೇತ್ರಗಳಾಗಿವೆ. ಇವರನ್ನು ankur.madan@apu.edu.in ಇಲ್ಲಿ ಸಂಪರ್ಕಿಸಬಹುದು.

ಅನುವಾದ: **ವಿನಯಾ ವಿಠ್ಠಲ** । ಪರಿಶೀಲನೆ: **ಲತಾ ಕೆ ಸಿ**